



ಹಾದಿಯನ್ನು ಹಿತಕರವಾಗಿಸುವ ಚಿತ್ಕುಲದಲ್ಲಿನ ನದಿ

ನಾವು ಹೊರಟದ್ದು ‘ನಾರ್ಕಂಡ್’ ಎಂಬ ಜಾಗಕ್ಕೆ. ಈ ಮೊದಲು ನಾನು ಇದರ ಹೆಸರನ್ನು ಎಲ್ಲೂ ಕೇಳಿರಲಿಲ್ಲ. ಈ ಸ್ಥಳವನ್ನು ಹಿಮಾಚಲದ ‘ಹಣ್ಣಿನ ಬಟ್ಟಲು’ ಎಂದೇ ಕರೆಯುತ್ತಾರೆ. ಇದು ಶಿಮ್ಲಾ ಜಿಲ್ಲೆಗೆ ಸೇರಿರುವ ಸ್ಥಳ. ಹಾದಿಯುದ್ದಕ್ಕೂ ಸೇಬಿನ ತೋಟಗಳು. ಅವು ಇನ್ನೂ ಹೀಚು ಕಾಯಿಯಾಗಿರುವುದರಿಂದ ಅವುಗಳಿಗೆ ತೆಳುವಾದ ಬಿಳಿಯ ಬಟ್ಟೆಯಿಂದ ಮುಚ್ಚಿದ್ದರು. ಇಡೀ ಸೇಬಿನ ತೋಟವೇ ಹಿಮಾಚ್ಛಾದಿತವಾಗಿದೆಯೇನೋ ಎಂಬಂತೆ ತೋರುತ್ತಿತ್ತು. ನಂತರ ನಮ್ಮ ಪಯಣ ಸ್ಪಿಟಿಯತ್ತ.

‘ಸ್ಪಿಟಿ’ ಎಂದರೆ ‘The Middle Land’. ಅಂದರೆ, ಟಿಬೆಟ್ ಮತ್ತು ಭಾರತದ ಮಧ್ಯದ ಪ್ರದೇಶ. ‘ಸ್ಪಿಟಿ’ಯನ್ನು ಸ್ಥಳೀಯರು ಉಚ್ಚರಿಸುವುದು ‘ಪಿಟಿ’ ಎಂದು. ಬೋತಿ ಭಾಷೆಯಲ್ಲಿ ಇದು ‘ಹೈಆಲ್ಟಿಟ್ಯೂಟ್’ ಎಂದರ್ಥ. ಅಂದರೆ, ಸಮುದ್ರ ಮಟ್ಟಕ್ಕಿಂತ ಅತಿ ಎತ್ತರದ ಸ್ಥಳ. ಭೂತಾನ್, ಲಡಾಕ್, ಲಾಹೋರ್, ಕುಲು, ಕಿನ್ನೂರು ಇಂತಹ ಸುಂದರ ಪ್ರದೇಶಗಳಿಂದ ಆವೃತ್ತವಾಗಿರುವ ಸ್ಪಿಟಿ, ದೈವಸೃಷ್ಟಿಯ ಸುಂದರ ಕ್ಯಾನ್ವಾಸ್ ಎನ್ನಬಹುದು. ಇಲ್ಲಿ ಹರಿಯುವ ಸ್ಪಿಟಿ ನದಿಯಿಂದಲೂ ಇದನ್ನು ‘ಸ್ಪಿಟಿ ವ್ಯಾಲಿ’ ಎನ್ನುತ್ತಾರೆ. ಅತ್ಯಂತ ಥಂಡಿಯಿಂದ ಕೂಡಿದ ಮರಳುಗಾಡು ಎಂದೂ ಹೇಳಬಹುದು.

‘ಸ್ಪಿಟಿ ವ್ಯಾಲಿ’ಯಲ್ಲಿ ನಮ್ಮ ಪ್ರವಾಸಿ ಮಾರ್ಗದರ್ಶಿ ಕಮ್ ವಾಹನ ಚಾಲಕ, ಹೋಂ ಸ್ಟೇವೊಂದಕ್ಕೆ ಕರೆದುಕೊಂಡು ಹೋದರು. ಬೆಟ್ಟದ ತಪ್ಪಲಿನ ಒಂದು ಚಿಕ್ಕ ಮನೆ. ತಿಂಡಿ, ಚಹಾ, ಬಿಸಿನೀರು ಎಲ್ಲವನ್ನು ಅಚ್ಚುಕಟ್ಟಾಗಿ ಒದಗಿಸಿದರು. ಇಲ್ಲಿ ಒಂದು ವಿಶೇಷವೆಂದರೆ, ಈ ಹಳ್ಳಿಯ ಜನ ಮಳೆಯನ್ನೇ ಕಂಡಿಲ್ಲ. ನಾವು ಉಳಿದಿದ್ದ ಮನೆಯ ಒಡತಿ ಇದನ್ನೇ ಹೇಳಿದರು.

ಮುದ್ದು ಮುದ್ದು ಮಕ್ಕಳು, ಊರ ತುಂಬಾ ತುಪ್ಪಳ ತುಂಬಿದ ಮುದ್ದಾದ ಕುರಿಮರಿಗಳು, ಬಿಸಿ ಬಿಸಿ ಚಹಾ, ಮೊಮೊಸ್ ಎಲ್ಲವೂ ಚಂದವೇ. ನಾವು ಅಲ್ಲಿಂದ ಹೊರಟು ಸಾಂಗ್ಲಾಗೆ ಬಂದೆವು. ಅಲ್ಲಿ ಮುಂದೆ ‘ಪಿನ್ ರಿವರ್’ ಸಿಕ್ಕಿತು. ಪಿನ್ ರಿವರ್‌ನ ಹ್ಯಾಂಗಿಂಗ್ ಬ್ರಿಡ್ಜ್ ಅದ್ಭುತ.

ಇದು ಟಿಬೆಟ್‌ನ ಗಡಿ ಪ್ರದೇಶವಾಗಿದ್ದು, ಭಾರತೀಯ ಸೇನಾ ತಂಗುದಾಣ ಸಹ ಆಗಿದೆ. ಸಾಂಗ್ಲಾ ಇಂದ ಚಿತ್ಕುಲ, ಕಲ್ಪಾ, ಕಿನ್ನೂರ್ ಕೈಲಾಶ್ ಕಡೆ ಹೊರಟೆವು. ಕೈಲಾಶ್‌ನಲ್ಲಿ 79 ಅಡಿ ಉದ್ದದ ಶಿವಲಿಂಗವಿದೆ. ಇದು ಯಾವಾಗಲೂ ಹಿಮದಿಂದ ಆವೃತ್ತವಾಗಿರುತ್ತದೆ. ಸೂರ್ಯ ಹಾಜರಾಗಿ ಶಿವಲಿಂಗದ ಮೇಲೆ ತನ್ನ ಕಿರಣವನ್ನು ಚಾಚಿದಾಗಲಷ್ಟೆ ಇದರ ದರ್ಶನ. ಈ ಶಿವಲಿಂಗ ಸೆಕೆಂಡಿಗೊಮ್ಮೆ ತನ್ನ ಬಣ್ಣ ಬದಲಿಸುತ್ತದೆ. ಪಾರ್ವತಿ ಕುಂಡ್ ಸಹ ಇದ್ದು, ಇದನ್ನು ಪಾರ್ವತಿಯೇ ನಿರ್ಮಿಸಿದ್ದೆಂದು ಹೇಳಲಾಗುತ್ತದೆ. ಇಲ್ಲಿಗೂ ಟ್ರೆಕ್ಕಿಂಗ್ ಬರುತ್ತಾರೆ. ನಾವು ಜೂನ್ ತಿಂಗಳಲ್ಲೇ ಪ್ರವಾಸ ಕೈಗೊಂಡಿದ್ದರಿಂದ ಕಿನ್ನೂರು ಕೈಲಾಶ್‌ನಲ್ಲಿ ಶಿವಲಿಂಗ ದರ್ಶನವಾಯ್ತು. ವರ್ಣಿಸಲಾಗದ ಅದ್ಭುತ ಅನುಭೂತಿಯದು. ಶಿವ ಪಾರ್ವತಿಯರು ಪ್ರೀತಿಯಿಂದಿರುವ ಪುರಾಣದ ಕಥೆ ಕೇಳುವಾಗಲೇ ಮನ ಹಗುರವಾಯಿತು. ಚಳಿಗಾಲದಲ್ಲಿ ಶಿವ ಇಲ್ಲಿ ದೇವಾನುದೇವತೆಗಳ ಸಭೆ ಕರೆಯುತ್ತಾನಂತೆ. ಆ ಸಮಯದಲ್ಲಿ ಅಲ್ಲಿ ಹೋದವರು ಬದುಕುವುದಿಲ್ಲ ಎಂಬ ಮಾತು ಪ್ರಚಲಿತದಲ್ಲಿದೆ. ಆ ಚಳಿಗೆ ಅಲ್ಲಿಗೆ ಹೋಗಲು ಸಾಧ್ಯವಿಲ್ಲ ಎಂಬುದು ನಿಜ. ಈ ಪರ್ವತ ಸಮುದ್ರಮಟ್ಟದಿಂದ 11,318 ಅಡಿ ಎತ್ತರದಲ್ಲಿದೆ.

ನಂತರ ನಾವು ಹೋಗಿದ್ದು ನಾಕೊ ಟ್ಯಾಬೋ ಮೊನಾಸ್ಟರಿ (Caves of Buddha). ನ್ಯಾಕೊ ವ್ಯಾಲಿ ಸುತ್ತಲೂ ಹಿಮಾಚ್ಛಾದಿತ ಪರ್ವತಗಳು. ಆ ಪರ್ವತಗಳ ನಡುನಡುವೆಯೇ ಸಮತಟ್ಟಾದ ಜಾಗವೂ ಇದ್ದು, ಅಲ್ಲಿ ಸಾವಿರ ವರ್ಷಗಳಷ್ಟು ಹಳೆಯದಾದ ಬೌದ್ಧ ವಿಹಾರವಿದೆ. ಭೂತಾನ್‌ನಲ್ಲಿದ್ದಂತೆ ಇಲ್ಲಿಯೂ ಬುದ್ಧ ಅರೆನಿಮೀಲಿತ ನೇತ್ರನಾಗಿ ಧ್ಯಾನಿಸುತ್ತಿದ್ದಾನೆ. ಅವನನ್ನು ನೋಡುತ್ತಲೇ ಮನಸ್ಸಿನ ತುಂಬಾ ಶಾಂತತೆ ಆವರಿಸಿಕೊಳ್ಳುತ್ತದೆ. ವಿಶ್ವದ ಅತೀ ಎತ್ತರದ ಪೋಸ್ಟ್‌ಆಫೀಸ್ ಇಲ್ಲಿದ್ದು, 4440 ಅಡಿ ಎತ್ತರದಲ್ಲಿ ಸುಂದರ ಪ್ರಕೃತಿಯ ನಡುವೆ ನಾವು ಪೋಸ್ಟ್ ಕಾರ್ಡ್‌ಗಳನ್ನು ಖರೀದಿಸಿ ನಮ್ಮ ಮನೆಗೆ ಪೋಸ್ಟ್ ಮಾಡಿ ಬಂದೆವು. ಜೊತೆಗೆ ಭಾರತದ ಕಟ್ಟ ಕಡೆಯ ಚಿತ್ಕುಲ್‌ನ ಚಹಾ ಅಂಗಡಿಯಲ್ಲಿ ಚಹಾ ಕುಡಿದಿದ್ದು ಅಚ್ಚಳಿಯದ ನೆನಪು.

ಮುಂದೆ ನಾವು ಹೋಗಿದ್ದು ಚಂದ್ರತಾಲ್ ಲೇಕ್. ಅಲ್ಲಿಯ ಚಳಿಗೆ, ಪ್ರಯಾಣದ ಆಯಾಸಕ್ಕೆ ನಮ್ಮಲ್ಲಿ ಕೆಲವರಿಗೆ ಜ್ವರ ಆರಂಭವಾಗಿತ್ತು. ಆದರೆ ಚಂದ್ರತಾಲ್ ಲೇಕ್‌ಗೆ ಹೋಗಲೇಬೇಕೆಂಬ ಸಂಕಲ್ಪ ನನ್ನದಾಗಿತ್ತು.

ಚಂದ್ರತಾಲ್ ಲೇಕ್‌ಗೆ ಹೊರಡುವ ಹಾದಿ ಅತ್ಯಂತ ಕಠಿಣ. ಕಲ್ಲು ರಸ್ತೆ, ತೆಳುವಾಗಿ ಹರಿಯುತ್ತಿದ್ದ ನದಿಗಳು. ಆಗಲೇ ಸಂಜೆಯಾಗುತ್ತಾ ಬರುತ್ತಿತ್ತು. ಮೈಕೊರೆವ ಚಳಿ, ರೊಯ್ಯೆಂದು ಬೀಸುತ್ತಿದ್ದ ಕುಳಿರ್ಗಾಳಿ ನಡುವೆ ಸಾಗಿ 4290 ಮೀಟರ್ ಎತ್ತರದಲ್ಲಿರುವ ಚಂದ್ರತಾಲ್ ಲೇಕ್ (moon Lake ) ತಲುಪಿದಾಗ ಸಂತೋಷಕ್ಕೆ ಪಾರವೇ ಇರಲಿಲ್ಲ. ಸುತ್ತಲೂ ಪರ್ವತಗಳ ಸಾಲು. ಸ್ಫಟಿಕ ನೀಲಿಯ, ಶಾಂತವಾಗಿ ಹರಡಿಕೊಂಡಿರುವ ಸರೋವರ. ನಮ್ಮ ಆಯಾಸವೆಲ್ಲಾ ಮಾಯವಾಗಿ ತಣ್ಣಗೆ ಅಲ್ಲಿಯೇ ಧ್ಯಾನಸ್ಥ ಸ್ಥಿತಿಯಲ್ಲಿ ಕುಳಿತೇ ಬಿಟ್ಟೆ. ಈ ಸುಂದರ ಸರೋವರದಲ್ಲಿ ರಾತ್ರಿ ನಕ್ಷತ್ರಗಳು ಆಗಸದಿಂದಿಳಿದು ಮೀಯುತ್ತವೆ ಎಂದು ಹೇಳುತ್ತಾರೆ. ಯಾರೂ ನೀರನ್ನು ಮುಟ್ಟುವಂತಿಲ್ಲ. ನೀರಿಗೆ ಇಳಿಯುವಂತಿಲ್ಲ. ನಕ್ಷತ್ರಗಳು ಮಿಂದೇಳುವ ಕಲ್ಪನೆಯೇ ಅಮೋಘ. ಹಿಂದೂ ಪುರಾಣದ ಪ್ರಕಾರ ಪಂಚ ಪಾಂಡವರಲ್ಲಿ ಹಿರಿಯನಾದ ಯುಧಿಷ್ಠಿರನನ್ನು ಇಂದ್ರನು ತನ್ನ ರಥದಲ್ಲಿ ಇಲ್ಲಿಂದಲೇ ಸ್ವರ್ಗಕ್ಕೆ ಕರೆದೊಯ್ದ. ನಾವು ಹಿಮಾಲಯದ ಪ್ರಕೃತಿಯ ತಾಣದಲ್ಲೇ ಸ್ವರ್ಗ ಕಾಣಬಹುದು.

ಅಂತೂ ಆ ದಿನ ಚಂದ್ರತಾಲ್ ಲೇಕ್ ಮುಗಿಸಿ ಅಚ್ಚುಕಟ್ಟಾದ ಟೆಂಟ್‌ಗಳಲ್ಲಿ ಉಳಿದುಕೊಂಡೆವು. ಚಳಿ ಮೈ ಕೊರೆಯುತ್ತಿತ್ತು. ಜ್ವರದ ತಾಪ ಏರುತ್ತಿತ್ತು. ಎಲ್ಲರಿಗೂ ತೀವ್ರವಾದ ತಲೆನೋವು ಪ್ರಾರಂಭವಾಯಿತು. ಆಮ್ಲಜನಕದ ಕೊರತೆ ಬಾಧಿಸಲು ಆರಂಭಿಸುತ್ತಿದ್ದಂತೆ ಮನಾಲಿಯತ್ತ ಹೊರಟುಬಿಟ್ಟೆವು. ಕೆಳಗೆ ಇಳಿಯುತ್ತಾ ಎಲ್ಲರಲ್ಲೂ ಪ್ರಾಣವಾಯು ಸಂಚಾರವಾಯ್ತು.

ಪ್ರತಿಕ್ರಿಯಿಸಿ: feedback@sudha.co.in